ಶೇ.64.13% ಇರುತ್ತದೆ. ಈ ಎರಡು ಬಿಡ್ ಪ್ರೀಮಿಯಮ್‌ಗಳು ಅತ್ಯಧಿಕವಾಗಿರುವ ಹಿನ್ನೆಲೆಯಲ್ಲಿ, ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲು ಎ.ಡಿ.ಬಿ. ಒಪ್ಪಿಗೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಕಾರಣಗಳಿಂದ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಭವಾಗಿರುತ್ತದೆ.

ಈ) ಮತ್ತು ಉ) ಬಿಡ್ ಪ್ರೀಮಿಯಮ್‌ಗಳು ಅತ್ಯಧಿಕವಾಗಿರುವ ಹಿನ್ನೆಲೆಯಲ್ಲಿ, ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲು ಎ.ಡಿ.ಬಿ. ಒಪ್ಪಿಗೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಎ.ಡಿ.ಬಿ. ಒಪ್ಪಿಗೆ ನಂತರ ಮಾತುಕತೆ ನಡೆಸಿ. ಸಫಲವಾದಲ್ಲಿ ಗುತ್ತಿಗೆ ವಹಿಸಿ ಕಾಮಗಾರಿ ಪ್ರಾರಂಭಿಸಲಾಗುವುದು.

ತ್ಯಾಜ್ಯ ಸಂಗ್ರಹ ಶುಲ್ಕ

369 : (462)

ಡಾ ॥ ಮಾಲಕರೆಡ್ಡಿ ಎ.ಬಿ.(ಯಾದಗಿರಿ)

ಅ) ಬೆಂಗಳೂರು ಸುತ್ತಮುತ್ತಲ ಅನೇಕ ರೆವಿನ್ಯೂ ಬಡಾವಣೆಗಳಲ್ಲಿ ನಿರ್ಮಾಣವಾದ ಮನೆಗಳಿಂದ ಕಟ್ಟಡ ತೆರಿಗೆ ಪಾವತಿಸಿಕೊಳ್ಳಲಾಗುತ್ತಿದ್ದು, ಅಲ್ಲಿ ಯಾವುದೇ ರೀತಿಯ ತ್ಯಾಜ್ಯ ವಿಲೇವಾರಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಿ.ಬಿ.ಎಂ.ಪಿ. ಘನತ್ಯಾಜ್ಯ ವಿಲೇಮಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೆವಿನ್ಯೂ ಬಡಾವಣೆಗಳಲ್ಲಿ ರಸ್ತೆ, ನೀರು ಯಾವ ಸೌಲಭ್ಯಗಳಿಲ್ಲದಿದ್ದರೂ ಜನ 2009 ರಿಂದ ತೆರಿಗೆ ಪಾವತಿಸುತ್ತಿದ್ದು, ಈ ಬಡಾವಣೆಗಳಲ್ಲಿ ಪಾಲಿಕೆ ಸಿಬ್ಬಂದಿ ಕಸ ಸಂಗ್ರಹಿಸುತ್ತಿಲ್ಲವಾದರೂ ತೆರಿಗೆಯಲ್ಲಿ ಘನತ್ಯಾಜ್ಯ ವಿಲೇಮಾರಿ ಶುಲ್ಕ ಪಡೆಯುತ್ತಿರುವುದಕ್ಕೆ ಕಾರಣವೇನು;

ಈ) ಈ ಬಡಾವಣೆಗಳಲ್ಲಿ ತ್ಯಾಜ್ಯ ಸಂಗ್ರಹಿಸದೇ ಇರುವುದರಿಂದ ಆ ಶುಲ್ಕವನ್ನು ಪಡೆಯದೇ ಇರಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಹೊರಮಾವು ಓಂ ಶಕ್ತಿ ಬಡಾವಣೆಯಲ್ಲಿ ಕಸ ಸಂಗ್ರಹಿಸುತ್ತಿಲ್ಲವಾದರೂ ತೆರಿಗೆಯೊಂದಿಗೆ ತ್ಯಾಜ್ಯ ಸಂಗ್ರಹ ಶುಲ್ಕ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಂಗಳೂರು ಸುತ್ತಮುತ್ತಲ ರೆವಿನ್ಯೂ ಬಡಾವಣೆ ಹಾಗೂ ಕಟ್ಟಡ ಮಾಲೀಕರಿಂದ ತೆರಿಗೆ ಪಾವತಿಸಿಕೊಳ್ಳಲಾಗಿದೆ. ಹಾಗೂ ಘನತ್ಯಾಜ್ಯ ತೆರಿಗೆ ಶುಲ್ಕವನ್ನು ಸಹ ವಸೂಲಿ ಮಾಡಿಕೊಳ್ಳಲಾಗುತ್ತಿದೆ. ಸಾಮಾನ್ಯವಾಗಿ ಎಲ್ಲಾ ರೆವಿನ್ಯೂ ಬಡಾವಣೆಗಳಲ್ಲಿ ಕಸ ಸಂಗ್ರಹಣೆ ಕಾರ್ಯ ಮಾಡಲಾಗುತ್ತಿದೆ.

ಆ) ಬಂದಿದೆ.

ಇ) ಮಹಾನಗರ ಪಾಲಿಕೆಯ ರೆವಿನ್ಯೂ ಬಡಾವಣೆಗಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಮಾನ್ಯವಾಗಿ ಎಲ್ಲಾ ರೆವಿನ್ಯೂ ಬಡಾವಣೆಗಳಲ್ಲಿ ಕಸ ಸಂಗ್ರಹಣೆ ಕಾರ್ಯ ಮಾಡಲಾಗುತ್ತಿದೆ ಹಾಗೂ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಯನ್ನು ನೀಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಂಸ್ಥೆಯವರು ತೆಗೆದು ಕೊಂಡಿರುತ್ತಾರೆ.

ಈ) ಈ ಬಡಾವಣೆಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಲು ಮಹಾನಗರ ಪಾಲಿಕೆ ವತಿಯಿಂದ ಕ್ರಮ ಜರುಗಿಸಲಾಗುತ್ತಿರುವುದರಿಂದ ಉದ್ಭವಿಸುವುದಿಲ್ಲ.

ಉ) ಹೊರಮಾವು ಓಂ ಶಕ್ತಿ ಬಡಾವಣೆ ಈ ಮೊದಲು ಹೊರಮಾವು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು, 2007 ರಿಂದ ಬಿಬಿಎಂಪಿಯ ಆಡಳಿತ ವ್ಯಾಪ್ತಿಗೆ ಬಂದಿರುತ್ತದೆ. ಈ ಬಡಾವಣೆಯು ರೆವಿನ್ಯೂ ಬಡಾವಣೆಯಾಗಿರುವುದರಿಂದ, ಇಲ್ಲಿನ ಯಾವುದೇ ಕಟ್ಟಡಗಳಿಗೆ ಬಿಬಿಎಂಪಿಯಿಂದ ನಕ್ಷೆ ಅನುಮೋದನೆ ಪಡೆದಿರುವುದಿಲ್ಲ. ಈ ಬಡಾವಣೆ ಪ್ರಸ್ತುತ 1.7 ಕಿ.ಮೀ. ವ್ಯಾಪ್ತಿ ಪ್ರದೇಶ ಹೊಂದಿದ್ದು, ಈ ಮೊದಲು ಖಾಲಿ ನಿವೇಶನಗಳಾಗಿದ್ದು, ಹಾಲಿ ಇಲ್ಲಿ ಕೇವಲ 45 ವಾಸದ ಮನೆಗಳು ಬಂದಿರುತ್ತದೆ. ಬಹುತೇಕ ಪ್ರದೇಶ ಇಂದಿಗೂ ಖಾಲಿ ಇರುತ್ತದೆ. ಆದರೂ ಈ ಬಡಾವಣೆಯಿಂದ ವಾರಕ್ಕೆ ಎರಡು ಬಾರಿ ಬಿಬಿಎಂಪಿ ವತಿಯಿಂದ ತ್ಯಾಜ್ಯವನ್ನು ಸಂಗ್ರಹ ಮಾಡಲಾಗುತ್ತಿದೆ. ಘನತ್ಯಾಜ್ಯ ವಿಲೇವಾರಿಗೆ ಹೊಸದಾಗಿ ಟೆಂಡರ್ ಆಗಿದ್ದು, ಹೊಡ ಟೆಂಡರ್‌ನಲ್ಲಿ ಸದರಿ ಪ್ರದೇಶವನ್ನು ಸೇರಿಸಿ ಟೆಂಡರ್ ಕರೆದಿರುವುದರಿಂದ ಹೊಸ ಟೆಂಡರ್ ಚಾಲ್ತಿಗೆ ಬಂದ

ದಿನಾಂಕದಿಂದಲೇ ಬೇರೆ ಬಡಾವಣೆಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡುವಂತೆ ಪ್ರತಿ ದಿನ ಅಲ್ಲಿಯೂ ಸಹ ಕಸ ವಿಲೇವಾರಿ ಮಾಡಲಾಗುವುದು.

ಊ) ಈಗಾಗಲೇ ಬಿಬಿಎಂಪಿ ವತಿಯಿಂದ ಕ್ರಮ ವಹಿಸಲಾಗುತ್ತಿದೆ. ಯಾವುದಾದರೂ ನಿರ್ದಿಷ್ಟ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ. ಕೂಡಲೇ ನಿಯಮಾನುಸಾರ ಕ್ರಮ ಜರುಗಿಸಲು ಪಾಲಿಕೆಗೆ ಸೂಚಿಸಲಾಗುವುದು.

ಯೋಜನಾ ಕಾಮಗಾರಿಗಳ ಅನುಷ್ಠಾನ

428 : (622)

ಶ್ರೀ ನರೇಂದ್ರ .ಆರ್ (ಹನೂರು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನಾ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೇಮಿಸಿರುವ ಖಾಸಗಿ ಸಲಹಾ ಸಂಸ್ಥೆಗಳಿಗೆ ಕಳೆದ 2 ವರ್ಷಗಳಲ್ಲಿ ಎಷ್ಟು ಹಣವನ್ನು ಪಾವತಿ ಮಾಡಲಾಗಿದೆ?

ಆ) ಈ ಸಂಸ್ಥೆಗಳು ಎಷ್ಟು ಕಾಮಗಾರಿಗಳ ಯೋಜನಾ ವರದಿಗಳನ್ನು ನೀಡಿದ್ದಾರೆ?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನಾ ವರದಿಗಳಿಗಾಗಿ ಕಳೆದ 2 ವರ್ಷಗಳಲ್ಲಿ 39 ಖಾಸಗಿ ಸಲಹಾ ಸಂಸ್ಥೆಗಳಿಗೆ ರೂ.1380.21 ಲಕ್ಷಗಳನ್ನು ಪಾವತಿಸಲಾಗಿರುತ್ತದೆ.

ಆ) 39 ಖಾಸಗಿ ಸಲಹಾ ಸಂಸ್ಥೆಗಳು ಒಟ್ಟು 413 ಯೋಜನಾ ವರದಿಗಳನ್ನು ನೀಡಿರುತ್ತಾರೆ.